ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಗುಡೇಕೋಟೆ

ಸಂ/ಕಂ/ಹ.ಬ./ನಾಕಗು/09/2016-17. ದಿನಾಂಕ 26-09-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಕ್ಷೇತ್ರ ಅಭಿವೃದ್ಧಿ ಅಧಿಕಾರಿ<br>2)ಕರುಣೇಶ ತಂದೆ ಲೇಟ್ ಹನುಮಂತಪ್ಪ<br>3)ನಾಗೇಂದ್ರಪ್ಪ ತಂದೆ ಲೇಟ್ ಹನುಮಂತಪ್ಪ<br>4)ಲಿಂಗಪ್ಪ ತಂದೆ ಲೇಟ್ ಬಸಪ್ಪ<br>5)ಭರ್ಮಪ್ಪ ತಂದೆ ಲೇಟ್ ಬಸಪ್ಪ<br>6)ಗೌರಮ್ಮ ಗಂಡ ನಣ್ಯಪ್ಪ<br>7)ಎಸ್.ವೀರಭದ್ರಪ್ಪ ತಂದೆ ಸಿದ್ದಪ್ಪ<br>8)ವುಟ್ಟೀರಮ್ಮ ಗಂಡ ಕೊಟ್ರಪ್ಪ<br>ಎಂ.ಬಿ.ಅಯ್ಯನಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು | ಬೊಮ್ಮಕ್ಕ ಗಂಡ ದೊಡ್ಡ ಓಬಣ್ಣ<br>ಎಂ.ಬಿ.ಅಯ್ಯನಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಎಂ.ಬಿ.ಅಯ್ಯನಹಳ್ಳಿ ಗ್ರಾಮದ ಸನಂ 89ಬಿ. 90ಬಿ/ಬಿ2. ವಿಸ್ತೀರ್ಣ 1-02. 0-76. ಎಕ್ರೆ ಜಮೀನುಗಳನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಎಂ.ಬಿ.ಅಯ್ಯನಹಳ್ಳಿ ಗ್ರಾಮದ ಸನಂ 89ಬಿ. 90ಬಿ/ಬಿ2. ವಿಸ್ತೀರ್ಣ 1-02. 0-76. ಎಕ್ರೆ ಜಮೀನುಗಳನ್ನು ಸದರಿ ಗ್ರಾಮದ ಭರಮಪ್ಪ ತಂದೆ ಲೇಟ್ ಬಸಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಎಂ.ಬಿ.ಅಯ್ಯನಹಳ್ಳಿ ಇವರು ನಮೂನೆ-21 ನೋಟಿಸನ್ನು ದಿನಾಂಕ 02-11-2015. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಚೆಕ್‌ಲಿಸ್ಟನಲ್ಲಿ ಬೊಮ್ಮಕ್ಕ ಗಂಡ ದೊಡ್ಡ ಓಬಪ್ಪ ಇವರ ಹೆಸರು ನಮೂದಿಸಿಲ್ಲದ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 11/2015-16. ದಿನಾಂಕ 02-12-2015. ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 28-06-2016 ರಿಂದ 26-09-2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಎಂ.ಬಿ.ಅಯ್ಯನಹಳ್ಳಿ ಗ್ರಾಮದ ಸನಂ 89ಬಿ. 90ಬಿ/ಬಿ2. ವಿಸ್ತೀರ್ಣ 1-02. 0-76. ಎಕ್ರೆ ಜಮೀನುಗಳು ನಮ್ಮ ಅಜ್ಜನಾದ ದೊಡ್ಡ ಓಬಯ್ಯಗಳ ಬಸಪ್ಪ ಇವರ ಹೆಸರಲ್ಲಿ ಜಂಟಿ ಪಟ್ಟಾ ಲೆಕ್ಕ ದಾಖಲೆಗಳು ಇರುತ್ತವೆ. ಇವರು ದಿನಾಂಕ 01-08-1965 ರಂದು ಹಾಗೂ ನಮ್ಮ ಅಜ್ಜಿಯವರಾದ ಭರಮಜ್ಜಿ ಗಂಡ ದೊಡ್ಡ

ಮು.ತಿ.ನೋ:-2.

ಓಬಯ್ಯಗಳ ಬಸಪ್ಪ ಇವರು ದಿನಾಂಕ 05-09-1970 ರಂದು ಹಾಗೂ ನಮ್ಮ ತಂದೆಯವರಾದ ಬಸಪ್ಪ ತಂದೆ ಲೇಟ್ ದೋಡ್ಡ ಓಬಯ್ಯಗಳ ಬಸಪ್ಪ ಇವರು ದಿನಾಂಕ 06-08-1990 ರಂದು ಹಾಗೂ ನಮ್ಮ ತಾಯಿಯವರಾದ ನರಸಮ್ಮ ಗಂಡ ಲೇಟ್ ಬಸಪ್ಪ ಇವರು ದಿನಾಂಕ 07-06-1990 ರಂದು ಹಾಗೂ ಇನ್ನಿತರೇ ವಾರಸುದಾರರು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ನಮ್ಮ ಅಜ್ಜನವರಾದ ದೋಡ್ಡ ಓಬಯ್ಯಗಳ ಬಸಪ್ಪ ಇವರ ಹೆಸರನ್ನು ಕಡಿಮೆ ಮಾಡಿ ನಮ್ಮಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರ ಹಾಜರಾಗಿದ್ದು ಸದರಿ ವಿವಾದಿತ ಜಮೀನುಗಳಿಗೆ ನಾನು ವಾರಸುದಾರರಾಗಿರುವುದರಿಂದ ಪೋತಿವಾರಸು ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆ ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ಚೆಕ್‌ಲಿಸ್ಟನಲ್ಲಿ ಕ್ಷೇತ್ರ ಅಭೀವೃದ್ದಿ ಅಧಿಕಾರಿಗಳು ಇವರಿಗೆ ದಾನ ಕೊಟ್ಟ ಕ್ಷೇತ್ರ ನಮೂದಿಸಿಲ್ಲ ಮತ್ತು ದೊಡ್ಡ ಓಬಯ್ಯಗಳ ಬಸಪ್ಪ ಇವರ ತಂದೆಯ ಹೆಸರು ನಮೂದಿಸಿಲ್ಲದ ಕಾರಣ ಅರ್ಜಿದಾರರ ಕೋರಿಕೆಯನ್ನು ತಳ್ಳಿಹಾಕಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಎಂ.ಬಿ.ಅಯ್ಯನಹಳ್ಳಿ ಗ್ರಾಮದ ಸನಂ 89ಬಿ. 90ಬಿ/ಬಿ2. ವಿಸ್ತೀರ್ಣ 1-02. 0-76. ಎಕ್ರೆ ಜಮೀನುಗಳ ಕ್ಷೇತ್ರ ಅಭೀವೃದ್ದಿ ಅಧಿಕಾರಿಗಳಿಗೆ ದಾನ ಕೊಟ್ಟ ಕ್ಷೇತ್ರ ನಮೂದಿಸಿಲ್ಲದ ಕಾರಣ ಮತ್ತು ಮೂಲ ಪಟ್ಟದಾರರಾದ ದೊಡ್ಡ ಓಬಯ್ಯಗಳ ಬಸಪ್ಪ ಇವರ ತಂದೆಯ ಹೆಸರು ನಮೂದಿಸಿಲ್ಲದ ಕಾರಣ ಅರ್ಜಿದಾರರ ಕೋರಿಕೆಯನ್ನು ತಳ್ಳಿಹಾಕಿ ಪಹಣಿಯನ್ನು ಯಥಾಸ್ಥಿತಿಯಂತೆ ಮುಂದುರೆಸಲು ಆದೇಶಿಸುತ್ತಾ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 26-09-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಚೇರಿ ಗುಡೇಕೋಟೆ.
ಗುಡೇಕೋಟೆ

ಮು.ತಿ.ನೋ-3.

ಇದರ ಪ್ರತಿಯನ್ನು:

1) ಅರ್ಜಿದಾರರಾದ ಭರಮಪ್ಪ ತಂದೆ ಲೇಟ್ ಬಸಪ್ಪ ಹಾಗೂ ಇತರರು ಎಂ.ಬಿ.ಅಯ್ಯನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಬೊಮ್ಮಕ್ಕ ಗಂಡ ದೊಡ್ಡ ಓಬಣ್ಣ ಎಂ.ಬಿ.ಅಯ್ಯನಹಳ್ಳ ಗ್ರಾಮ ಕೂಡ್ಲಿಗಿ ತಾಲೂಕು ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಬಿ. ಪ್ರಕಾಶ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.